# ರಾಜ್ ಅಣ್ಣಾವ್ರ ಭೇಟಿಯ ನೆನಪು

■ ಕ್ಷಮಾ ಜಯಂತ್



ಸಣ್ಣ ಮಕ್ಕಳಿದ್ದಾಗ ನಮ್ಮ ಮನೆಯಲ್ಲಿ ಸಿನಿಮಾ, ನಟನಟಿಯರ ಬಗ್ಗೆ ಮಾತನಾಡುವ ಹಾಗಿರಲಿಲ್ಲ. ಮಡಿವಂತರೆಂದೋ, ಮಕ್ಕಳು ಸಿನಿಮಾ ಪ್ರಪಂಚದೆಡೆಗೆ ಆಕರ್ಷಿತರಾಗಿ ಹಾಳಾಗುತ್ತಾರೆಂಬ ಭಯವೋ ಗೊತ್ತಿಲ್ಲ. ಸಿನಿಮಾದವರ ಬಗ್ಗೆ ಮಾತಾನಾಡಿದ ನೆನಪಿಲ್ಲ. ಹಾಗಾಗಿ ಚಿತ್ರ ಪ್ರಪಂಚದ ಬಗ್ಗೆ ಜ್ಞಾನ ಕಡಿಮೆ.

ಮದುವೆಯಾಗಿ ಗಂಡನ ಮನೆಗೆ ಬಂದಾಗ ಅತ್ತೆ, ಮೈದುನ, ಪತಿ ಎಲ್ಲರೂ ಸಿನಿಮಾ ನಟ ನಟಿಯರ ಬಗ್ಗೆ ನಿರರ್ಗಳವಾಗಿ ಮಾತನಾಡುವಾಗ ನನಗೆ ಸೋಜಿಗ ಅನ್ನಿಸುತ್ತಿತ್ತು. ಅವರ ದೈನಂದಿನ ಮಾತುಕತೆಯಲ್ಲಿ ಸಿನಿಮಾ ಕಥೆ, ಕಲಾವಿದರ ಹೆಸರು ಸಹಜವಾಗಿ ಇರುತ್ತಿತ್ತು. ಮನೆಯವರೆಲ್ಲ ರಾಜಕುಮಾರರ ಅಪ್ಪಟ ಅಭಿಮಾನಿಗಳು. ನನ್ನ ಪತಿ ಜಯಂತ್ 'ಅಣ್ಣಾವ್ರ' ಅಖಂಡ ಅಭಿಮಾನಿಯೆಂದು ಅರಿತಾಗ ಏನೋ ಕಸಿವಿಸಿ. ಅವರ ನಟನಾ ಕೌಶಲ್ಯ, ಅವರ ಸ್ಪಷ್ಟ ಉಚ್ಚಾರಣೆ, ದೇಹದಾರ್ಢ್ಯತೆ... ಹೀಗೆ ಎಷ್ಟೆಲ್ಲಾ ವಿವರಣೆ ಕೊಟ್ಟರೂ ಕರಗದ ಉತ್ಸಾಹ! ಅವರ ಎಲ್ಲಾ ಸಿನಿಮಾ ನೋಡಿರುವುದಾಗಿ ಹೇಳಿದಾಗ ನಾನು ಪೆಚ್ಚು ನಗೆ ಬೀರಿದ್ದೆ. ಕಾಲಕ್ರಮೇಣ ನಾನೂ ಅಲ್ಪ ಸ್ವಲ್ಪ ಚಳಿಬಿಟ್ಟು ಚಂದನವನದ ಬಗ್ಗೆ ಕುತೂಹಲಿಯಾದೆ. ಮಾತನ್ನೂ ಆಡತೊಡಗಿದೆ. ಮನಸ್ಸಿನಲ್ಲಿ ಒಮ್ಮೆಯಾದರೂ ರಾಜಕುಮಾರರನ್ನು ನೋಡುವ ಬಯಕೆ ಮೂಡಿದ್ದಂತೂ ನಿಜ.

1994 ಏಪ್ರಿಲ್ 24, ಜಯಂತ್, 'ಅಣ್ಣಾವ್ರ ಹುಟ್ಟುಹಬ್ಬಕ್ಕೆ, ಅವರ ಮನೆಗೆ ಹೋಗಿ ಶುಭಾಶಯ ಹೇಳಿಬರೋಣ' ಎಂದಾಗ ಮನಸ್ಸಿಗೆ ಗೊಂದಲ, ಅಚ್ಚರಿ ಎನಿಸಿತು. ಏನೋ ಖುಷಿ ಏನೋ ಭಯ. 'ಅಲ್ಲೆಲ್ಲ ಜನಜಂಗುಳಿ ಬಹಳ ಇರುತ್ತಲ್ಲವೇ?' ಎಂದಾಗ, ಜಯಂತ್ ನಗುತ್ತಾ, 'ಹತ್ತಿರ ಹೋಗೊಕ್ಕೆ ಆಗೋಲ್ಲ. ದೂರದಿಂದ ನೋಡಿ ಬರೋಣ' ಎಂದರು. ಜಯಂತ್ ಪ್ರತಿವರ್ಷವೂ ಹೋಗಿ ನೋಡಿ ಬರುತ್ತಿದ್ದರೂ, ಈ ಸಲ ವಿಶೇಷವೆಂದರೆ ಹೆಂಡತಿ, ಮಗಳೊಂದಿಗೆ ಹೋಗುತ್ತಿರುವುದು.

ಸರಿ, ಇನ್ನೇನು? 11 ತಿಂಗಳ ಮಗು ಕ್ಷಿತಿಜಳೊಂದಿಗೆ ಸದಾಶಿವನಗರಕ್ಕೆ ರಾಜ್ ಮನೆಯತ್ತ ಹೊರಟೆವು. ಬೆಳಗಿನ 11 ಗಂಟೆ. ಮನೆಯ ಬಳಿ ಬೇಕಾದಷ್ಟು ಅಭಿಮಾನಿ ಬಳಗ ತುಂಬಿಹೋಗಿತ್ತು. ಎಲ್ಲೆಲ್ಲಿ ನೋಡಿದರೂ ಜನಸಾಗರ. ಆ ಗುಂಪನ್ನು ನೋಡಿಯೇ ನನಗೆ ವಾಪಸ್ಸು ಹೋಗಿಬಿಡುವಾ ಅನ್ನಿಸತೊಡಗಿತು. ಜಯಂತ್ 'ಸ್ವಲ್ಪ ತಡಿ, ಇನ್ನೊಂದೈದು ನಿಮಿಷ, ಅಣ್ಣಾವ್ರು ಹೊರಗೆ ಬಂದ ಮೇಲೆ ನೋಡಿ, ಹೊರಟು ಹೋಗೋಣ' ಎಂದಾಗ 'ಬೇಡವೇ ಬೇಡ, ಈಗಲೇ ಹೊರಟು ಹೋಗೋಣ, ಈ ಗುಂಪು ಗದ್ದಲದಲ್ಲಿ, ಅವರಿಗೆ ವಿಶ್ ಮಾಡುವುದಿರಲಿ, ಅವರು ನಮಗೆ ಕಾಣಿಸೋದೂ ಕಷ್ಟ, ಬೇಡ, ಮಗು ಬೇರೆ ಚಿಕ್ಕವಳು' ಎಂದು ಏನೇನೋ ಹೇಳಿ ಹೊರಡಲು ಅವಸರಿಸಿದೆ.

ಜುಲೈ 1993ರಲ್ಲಿ ಚಿ. ಉದಯಶಂಕರ್ ವಿಧಿವಶರಾಗಿದ್ದರು. ತಮ್ಮ ಆಪ್ತಮಿತ್ರನನ್ನು ಕಳೆದುಕೊಂಡ ರಾಜ್ ಅವರಿಗೆ ಹುಟ್ಟುಹಬ್ಬ ಆಚರಿಸುವ ಮನಸ್ಸೇ ಇರಲಿಲ್ಲ. ಹಾಗಾಗಿ ಈ ಸಲ ಅಭಿಮಾನಿಗಳನ್ನು ಭೇಟಿ ಮಾಡುವುದಿಲ್ಲ ಎಂಬ ವದಂತಿ ಹಬ್ಬಿತ್ತು. ಎಲ್ಲಾ ಅಭಿಮಾನಿಗಳೂ ನಿರಾಶರಾಗಿ ಸ್ವಲ್ಪ ಸ್ವಲ್ಪವೇ ಕರಗತೊಡಗಿದರು. ನಾನು 'ಈ ಸಲ ಸಿಗೋಲ್ಲ, ಹೊರಡೋಣ, ಇಲ್ಲಿ ತುಂಬಾನೇ ರಶ್ ಇದೆ. ಪ್ಲೀಸ್ ಹೊರಡೋಣ' ಎಂದು ದುಂಬಾಲು ಬಿದ್ದೆ.

ಅರೆಮನಸ್ಸಿನಿಂದ ಜಯಂತ್ ಸಹ ಹೂಂ ಅಂದದ್ದಾಯಿತು. ಇನ್ನೇನು ಹೊರಡಬೇಕು, ಗುಂಪಿನಲ್ಲಿ ಕಲರವ ಶುರುವಾಯಿತು. 'ಹೋ' ಎಂದು ಎಲ್ಲ ಕೂಗಿಕೊಂಡರು. ರಾಜ್ ಹೊರಗೆ ಬಂದಿದ್ದರು. ಅವರ ಹತ್ತಿರ ಹೋಗುವುದಿರಲಿ, ನನಗೆ ಅವರು ನಿಂತ ಜಾಗವೂ ಕಾಣುತ್ತಿರಲಿಲ್ಲ. ಕೈಯಲ್ಲಿ ಕ್ಯಾಮೆರಾ ಹಿಡಿದುಕೊಂಡು ಅವರ ಫೋಟೊ ಒಂದು ತೆಗೆದುಬಿಡುತ್ತೇನೆ. ಆಮೇಲೆ ಮನೆಗೆ ಹೋಗೋಣ. ಮಗುವನ್ನು ಎತ್ತಿಕೊಂಡು ಈ ಜಂಗುಳಿಯ ಮಧ್ಯೆ ಬರಲಾರೆ ಎಂದು ಹೇಳಿ, ಪಕ್ಕದಲ್ಲೇ ಇದ್ದ ಒಂದು ಕುರ್ಚಿಯ ಮೇಲೆ ಹತ್ತಿ ಫೋಟೊ ತೆಗೆಯತೊಡಗಿದೆ. ಆ ಕುರ್ಚಿ ಅದು ಯಾಕೆ ಅಲ್ಲಿತ್ತೋ ಗೊತ್ತಿಲ್ಲ. ಪುಣ್ಯಕ್ಕೆ ಗಟ್ಟಿಮುಟ್ಟಾಗಿ ಇತ್ತು ಆ ಕುರ್ಚಿ. ಮನಸ್ಸೋ ಇಚ್ಛೆ ನಾಲ್ಕೈದು ಫೋಟೊ ತೆಗೆದು. 'ಇನ್ನು ಹೊರಡುವಾ?' ಎಂದು ಮಗುವನ್ನೆತ್ತಿಕೊಂಡು ನಿಂತಿದ್ದ ಜಯಂತ್‌ಗೆ ಕೇಳಿದೆ. 'ಸರಿ' ಎಂದಾಗ ಕುರ್ಚಿ ಬಿಟ್ಟು ಕೆಳಗೆ ಇಳಿದೆ. ಇಳಿದ ತಕ್ಷಣ, ಎದುರಿಗೆ ಅಣ್ಣಾವರ ಅಂಗರಕ್ಷಕ ಅಜಾನುಬಾಹು ಬಂದು ನಿಂತ. 'ಬನ್ನಿ ಮೇಡಂ, ರಾಜ್ ಕುಮಾರ್ ಸಾರ್ ಕರೀತಾ ಇದ್ದಾರೆ'. ಆ ಕ್ಷಣ ಎಷ್ಟು ತಬ್ಬಿಬ್ಬುಗೊಂಡೆ! ನನ್ನ ಯಾಕೆ ಕರೀತಾ ಇದ್ದಾರೆ? ಫೋಟೊ ತೆಗೆದುಕೊಳ್ಳಬಾರದಿತ್ತಾ? ಕುರ್ಚಿ ಹತ್ತಬಾರದಿತ್ತಾ? ಗಲಿಬಿಲಿ, ಭಯ ಎಲ್ಲ ಮಿಶ್ರಭಾವ. ಎದೆ ಢವಗುಡುತಿತ್ತು. ಜಯಂತನೆಡೆಗೆ ಏನಿದು? ಎಂಬಂತೆ ನೋಡಿದೆ.

'ಬನ್ನಿ ಮೇಡಂ, ನಿಮ್ಮನ್ನೇ ಕರೀತಾ ಇದ್ದರೆ' ಮತ್ತೆ ಆತ ಎಂದಾಗ ಜಯಂತನೊಡನೆ ರಾಜಕುಮಾರರ ಕಡೆಗೆ ನಡೆದೆ. ಏನಾಯಿತಪ್ಪ ಇದು? ಮೊದಮೊದಲ ಸಲ ಹೀಗೆ ಬಂದದ್ದು. ತಪ್ಪಾಯಿತಾ!? ಏನು ತಪ್ಪು? ಹೀಗೆ ಯೋಚಿಸುತ್ತ ಅವನ ಹಿಂದೆ ನಡೆದೆ. ಜನರನ್ನು ತಳ್ಳುತ್ತಾ, ನಮ್ಮಿಬ್ಬರನ್ನು ರಾಜಕುಮಾರರಲ್ಲಿಗೆ ಕರೆದೊಯ್ದಾಗ, ನನಗೇ ಸೆಲೆಬ್ರಿಟಿ ಆದ ಹಾಗೆ ಅನ್ನಿಸಿತು.

ರಾಜಕುಮಾರರ ಮುಖಾಮುಖಿ ನಿಂತಾಗ ಮೂಕವಿಸ್ಮಿತಳಾದೆ. ಅವರು ಜಯಂತನ ಕೈಲಿದ್ದ ಮಗುವನ್ನು ಕೈ ಚಾಚಿ ಎತ್ತಿಕೊಂಡು ನಸುನಗುತ್ತಾ 'ಈಗ ಫೋಟೊ ತೆಗೆದುಕೊಳ್ಳಿ' ಎಂದಾಗ ನನಗೆ ನನ್ನ ಕಣ್ಣು ಕಿವಿಗಳ ಮೇಲೆ ನಂಬಿಕೆ ಬರಲಿಲ್ಲ. ಕಣ್ಣು, ಕಿವಿ ಏನು? ಮೂಗು, ಬಾಯಿ, ಕೈ, ಕಾಲು ಯಾವುದರ ಮೇಲೂ ನಂಬಿಕೆ ಇಲ್ಲದವಳಂತೆ ನಿಂತುಬಿಟ್ಟೆ. ಮತ್ತೆ ನಗುತ್ತಾ ರಾಜ್‌ಕುಮಾರ್ 'ಅಲ್ಲಿಂದ ಫೋಟೊ ತೆಗೆದದ್ದು ನೋಡಿದೆ, ಹತ್ತಿರದಿಂದ ಈಗ ತೆಗಿಯಿರಿ' ಎಂದಾಗ ಉಂಟಾದ ಆ ಸಂಚಲನ ವರ್ಣಿಸಲಸಾಧ್ಯ! ■